ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ), ಆ) ಸದರಿ ಕಾಲೇಜಿಗೆ ಒಂದು ಪ್ರಾಚಾರ್ಯರ ಹುದ್ದೆ, 6 ಉಪನ್ಯಾಸಕರ ಹುದ್ದೆಗಳು ಮಂಜೂರಾಗಿರುತ್ತದೆ.

ಸದರಿ ಕಾಲೇಜಿನಲ್ಲಿ ಸಮಾಜಶಾಸ್ತ್ರ ಉಪನ್ಯಾಸಕರ 2 ಹುದ್ದೆಗಳು ಖಾಲಿ ಇರುತ್ತದೆ. ಈ ಹುದ್ದೆಗಳನ್ನು ಮುಂದಿನ ನೇಮಕಾತಿಯಲ್ಲಿ ಭರ್ತಿ ಮಾಡಲಾಗುವುದು. ಅದಾಗ್ಯೂ ಸದರಿ ಉಪನ್ಯಾಸಕರ ಕೊರತೆಯನ್ನು ನೀಗಿಸಲು ಸರ್ಕಾರಿ ಪದವಿ ಪೂರ್ವ ಕಾಲೇಜು, ಐಗೂರಿನಿಂದ ಸಮಾಜ ಶಾಸ್ತ್ರ ಉಪನ್ಯಾಸಕರನ್ನೂ ಮತ್ತು ಸರ್ಕಾರಿ ಪದವಿಪೂರ್ವ ಕಾಲೇಜು ಶಿರಂಗಾಲದಿಂದ ರಾಜ್ಯ ಶಾಸ್ತ್ರ ಉಪನ್ಯಾಸಕರನ್ನು ವಾರಕ್ಕೆ 3 ದಿನಗಳಿಗೆ ನಿಯೋಜನೆ ಮೇರೆಗೆ ನೇಮಿಸಿ ವಿದ್ಯಾರ್ಥಿಗಳಿಗೆ ಉಪನ್ಯಾಸಕರ ಕೊರತೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ತೀರ್ಥಹಳ್ಳಿ ತಾಲ್ಲೂಕಿನ ಆರಗದಲ್ಲಿ ಜೂನಿಯರ್ ಕಾಲೇಜನ್ನು ಪ್ರಾರಂಭಿಸುವುದು.

2495(2943) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಇತ್ತೀಚೆಗೆ ಎಷ್ಟು ಸರ್ಕಾರಿ ಜೂನಿಯರ್ ಕಾಲೇಜುಗಳನ್ನು ಮುಚ್ಚಲಾಗಿದೆ, ಇವುಗಳನ್ನು ಎಲ್ಲೆಲ್ಲಿಗೆ ಸ್ಥಳಾಂತರಿಸಲಾಗಿದೆ; (ಕಾಲೇಜುವಾರು ವಿವರ ನೀಡುವುದು)

2) ತೀರ್ಥಹಳ್ಳಿ ಸರ್ಕಾರಿ ಜೂನಿಯರ್ ಕಾಲೇಜಿಗೆ ಪ್ರವೇಶ ಬಯಸಿಬಂದ ಅರ್ಜಿಗಳೆಷ್ಟು; ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶ ಕೊಟ್ಟರೆ ಕೊಠಡಿಗಳ ಸಂಖ್ಯೆ ಮತ್ತು ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

3) ತೀರ್ಥಹಳ್ಳಿಯಲ್ಲಿ ಜೂನಿಯರ್ ಕಾಲೇಜಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದು (ಪ್ರವೇಶ ಬಯಸಿರುವವರು) ಇದೇ ತಾಲ್ಲೂಕಿನ ಆಗರದಲ್ಲಿ ಒಂದು ಜೂನಿಯರ್ ಕಾಲೇಜು ತೆರೆಯಲು ಸರ್ಕಾರಕ್ಕೆ ಮನವಿ ಏನಾದರೂ ಬಂದಿದೆಯೇ ಈ ಬಗ್ಗೆ ಸರ್ಕಾರದ ನೀಲುವೇನು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ರಾಜ್ಯದಲ್ಲಿ ಪ್ರಸಕ್ತ ವರ್ಷ 16 ಕಾಲೇಜುಗಳನ್ನು ಮುಚ್ಚಲಾಗಿದೆ. ಇವುಗಳನ್ನು ಸ್ಥಳಾಂತರಿಸಿರುವ ವಿವರ ಲಗತ್ತಿಸಿದೆ.

2) ತೀರ್ಥಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಪ್ರಥಮ ಪಿಯುಸಿ ಪ್ರವೇಶ ಬಯಸಿ ಬಂದ ಅರ್ಜಿಗಳ ಸಂಖ್ಯೆ 249. ಪ್ರಥಮ ಪಿಯುಸಿಗೆ ಈಗಾಗಲೇ 294 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ದ್ವಿತೀಯ ಪಿ.ಯು.ಸಿ.ಯಲ್ಲಿ 197 ವಿದ್ಯಾರ್ಥಿಗಳಿರುತ್ತಾರೆ. ಅಗತ್ಯವಿರುವಷ್ಟು ಉಪನ್ಯಾಸಕರಿದ್ದಾರೆ. 6 ಕೊಠಡಿಗಳಿದ್ದು ಹೆಚ್ಚುವರಿ 2 ಕೊಠಡಿಗಳ ಅವಶ್ಯಕತೆಯಿದೆ.

3) ಹೌದು. ತೀರ್ಥಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಅಗತ್ಯವಿರುವ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು. ಅರಗಕ್ಕೆ ಈ ವರ್ಷ ಪದವಿಪೂರ್ವ ಕಾಲೇಜಿನ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಲಾಗಿದೆ.

ಅನುಬಂಧ (ಪ್ರಶ್ನೆ 2943 / 2001)

ಕ್ರಮ ಸಂಖ್ಯೆ	ರದ್ದುಪಡಿಸಲಾದ ಕಾಲೇಜು	ವಿದ್ಯಾರ್ಥಿ ಸಂಖ್ಯೆ		ಹೊಸ ಕಾಲೇಜು ಪ್ರಾರಂಭಿಸಿದ ಸ್ಥಳ
1)	ಸರ್ಕಾರಿ ಪ.ಪೂ. ಕಾಲೇಜು ಮಂಠಾಳ, ಬಸವಕಲ್ಯಾಣ ತಾ: ಬಿದರ್ ಜಿಲ್ಲೆ.	08	17	ಸರ್ಕಾರಿ ಪದವಿ ಪೂರ್ವ ಕಾಲೇಜು, ಬೀಳಗಿ, ಬಾಗಲಕೋಟೆ ಜಿಲ್ಲೆ.
2)	ಸರ್ಕಾರಿ ಪ.ಪೂ. ಕಾಲೇಜು ಅರೆ ಮಲ್ಲಾಪುರ ರಾಣೆ ತಾ: ರಾಣೆಬೆನ್ನೂರು ತಾ: ಹಾವೇರಿ ಜಿಲ್ಲೆ	18	08	ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಂಡರಗಿ, ಗದಗ ಜಿಲ್ಲೆ.
3)	ಸರ್ಕಾರಿ ಪ.ಪೂ. ಕಾಲೇಜು ದುತ್ತರಗಂವ್ ಆಳಂದ ತಾ: ಗುಲ್ಬರ್ಗ ಜಿಲ್ಲೆ	00	00	ಸರ್ಕಾರಿ ಪದವಿ ಪೂರ್ವ ಕಾಲೇಜು, ಪೋಲೀಸ್ ಕಾಲೋನಿ, ರಾಯಚೂರು (ವಿಜ್ಞಾನ ವಿಭಾಗ ಮಾತ್ರ)
4)	ಸರ್ಕಾರಿ ಪ.ಪೂ. ಕಾಲೇಜು ಮುಳಗಿ, ಮುಂಡಗೋಡು ತಾ: ದ.ಕ.	00	00	ಸರ್ಕಾರಿ ಪದವಿ ಪೂರ್ವ ಕಾಲೇಜು, ತೇರಗಾಂವ್ ಹಳಿಯಾಳ ತಾ: ದ.ಕ. ಜಿಲ್ಲೆ
5)	ಸರ್ಕಾರಿ ಪ.ಪೂ. ಕಾಲೇಜು ಹಿರೊಳ್ಳಿ, ಆಳಂದ ತಾ: ಗುಲ್ಬರ್ಗ ಜಿಲ್ಲೆ (ಈಗಾಗಲೇ ಮುಚ್ಚಿದ ಕಾಲೇಜು).	00	00	ಸರ್ಕಾರಿ ಪದವಿ ಪೂರ್ವ ಕಾಲೇಜು, ಗುರುಗುಂಟಾ, ಲಿಂಗಸಗೂರು ತಾ: ರಾಯಚೂರು
6)	ಸರ್ಕಾರಿ ಪ.ಪೂ. ಕಾಲೇಜು ಕರಡಿ, ಹುನಗುಂದ ತಾ: ಬಾಗಲಕೋಟೆ.	00	00	ಸರ್ಕಾರಿ ಪ.ಪೂ. ಕಾಲೇಜು ಹರದನ ಹಳ್ಳಿ, ಕೆ.ಆರ್.ನಗರ ತಾ: ಮೈಸೂರು ಜಿಲ್ಲೆ